ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ ನ್ಯಾಯಾಲಯ

<u>ಸಿ.ಸಿ. ನಂ.**817/2023**</u>

ಸಿ ಡಬ್ಲ್ಯು 14, ಪಿಡಬ್ಲ್ಯು10 .

ಸಾಕ್ಷಿದಾರರ ಹೆಸರು :-ನಾಗರಾಜ ಹೇಮಗಿರಿ ಮೈಲಾರ

ವಯಸ್ಸು :- 65 ವರ್ಷಗಳು

ಉದ್ಯೋಗ :- ನಿವೃತ್ತ

ವಾಸಸ್ಥಳ :- ರಾಣೆಬೆನ್ನೂರು

ದಿನಾಂಕ:11 -12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ:</u>- ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ದಿ: 02-11-20218 ರಿಂದ ದಿ: 10-03-2019 ರವರೆಗೆ ನಾನು ಸವಣೂರು ಪೋಲಿಸ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 25-02-2019 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕಿಕೃತ ದೂರಿನ ಮೇರೆಗೆ ಅಪರಾಧ ಸಂಖ್ಯೆ 19/2019 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅದೇ ದಿವಸ ಮೃತಳ ಶವವನ್ನು ಶವ ಪಂಚನಾಮೆಯನ್ನು ಚಾಸಾ-2,3, 4 ರವರ ಸಮಕ್ಷಮ ಬೆಳಗ್ಗೆ 11.30 ರಿಂದ 12.30 ರವರೆಗೆ ಜರುಗಿಸಲಾಯಿತು. ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ಕೊಟ್ಟು ಚಾಸಾ2,3 ರವರ ಸಮಕ್ಷಮ ಘಟನಾ ಜಾಗ ಪಂಚನಾಮೆಯನ್ನು ಮದ್ಯಾಹ್ನ 2.30 ರಿಂದ 3.30 ರವರೆಗೆ ಜರುಗಿಸಲಾಯಿತು. ಅದೇ ದಿನ ಸಾಯಂಕಾಲ 4.00 ರಿಂದ 4.30 ರವರೆಗೆ ಅಪಘಾತ ಪಡಿಸಿದ ವಾಹನದ ವಾಹನ ಪಂಚನಾಮೆಯನ್ನು ಚಾಸಾ-2 ,3 ರವರ ಸಮಕ್ಷಮ ಮಾಡಲಾಯಿತು . ಅದೇ ದಿನ ಚಾಸಾ 5 ರಿಂದ 9 ರವರ ಹೇಳಿಕೆ ಪಡೆದಿರುತ್ತೇನೆ . ದಿ 10-03-2019 ರಂದು 133 ಅಡಿಯಲ್ಲಿ ನೋಟಿಸನ್ನು ಅಪಘಾತ ಪಡಿಸಿದ ವಾಹನದ ಮಾಲಿಕರಿಗೆ ನೀಡಿರುತ್ತೇನೆ. ನಂತರ ನೋಟಿಸಗೆ ಉತ್ತರವನ್ನು ಪಡೆದಿರುತ್ತೇನೆ . ಕಡತವನ್ನು ಚಾಸಾ 15 ರವರಿಗೆ ಮುಂದಿನ

ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯ ನೋಡಿ ಗುರುತಿಸಿದ ಪ್ರ ವ ವರದಿಯನ್ನು ನಿಪಿ 19 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 19 ಎ ಎಂದು ಗುರುತಿಸಲಾಯಿತು.ಸಾಕ್ಷಿಯ ನೋಡಿ ಗುರುತಿಸಿದ ದೂರನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯ ನೋಡಿ ಗುರುತಿಸಿದ ಶವ ಪಂಚನಾಮೆಯನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 6 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಪೊಟೊಗಳನ್ನು ಈಗಾಗಲೇ ನಿಪಿ14 ಎಂದು ಗುರುತಿಸಲಾಗಿದೆ . ಸಾಕ್ಷಿಯ ನೋಡಿ ಗುರುತಿಸಿದ ಘಟನಾ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 7 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯ ನೋಡಿ ಗುರುತಿಸಿದ ಪೊಟೊಗಳನ್ನು ಈಗಾಗಲೇ ನಿಪಿ 8, 9 ಎಂದು ಗುರುತಿಸಲಾಯಿತು. ಸಾಕ್ಷಿಯ ನೋಡಿ ಗುರುತಿಸಿದ ವಾಹನ ಈಗಾಗಲೇ ಪಂಚನಾಮೆಯನ್ನು ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 3 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯ ನೋಡಿ ಗುರುತಿಸಿದ ಪೊಟೊಗಳನ್ನು ಈಗಾಗಲೇ ನಿಪಿ4,5 ಎಂದು ಗುರುತಿಸಲಾಯಿತು. ಸಾಕ್ಷಿಯ ನೋಡಿ ಗುರುತಿಸಿದ ವಾಹನ 133 ನೋಟಿಸನ್ನು ನಿಪಿ 20 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 20 ಎ ಎಂದು ಗುರುತಿಸಲಾಯಿತು.ಸಾಕ್ಷಿಯ ನೋಡಿ ಗುರುತಿಸಿದ ವಾಹನ 133 ನೋಟಿಸ ಉತ್ತರ ನಿಪಿ 21 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 21 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:</u> ಆರೋಪಿತರ ಪರ ಶ್ರೀ ಎಸ ಜಿ ಟಿ ವಕೀಲರಿಂದ

ಘಟನೇ ಆದ ದಿನವೇ ದೂರನ್ನು ಸ್ವಿಕರಿಸಿದ್ದೆನೆ . 2-3 ಜನ ದೂರು ನೀಡಲು ಬಂದಿದ್ದರು . ಮೃತ ಗಂಗವ್ವ ಅವರಿಗೆ ಪಿರ್ಯಾದಿದಾರರು ದೂರದ ಸಂಬಂದಿಕರು . ಅಪಘಾತ ಆದ ಎಷ್ಟು ದಿನಗಳ ನಂತರ ಘಟನಾ ಸ್ಥಳಕ್ಕೆ ಹೋದೆ ಎಂದರೆ ಸಾಕ್ಷಿಯು ಒಂದು ದಿನದ ನಂತರ ಘಟನಾ ಸ್ಥಳಕ್ಕೆ ಹೋಗಿದ್ದೆನೆ . ಅಪಘಾತ ಆದ ಬಗ್ಗೆ ಘಟನಾ ಸ್ಥಳದಲ್ಲಿ

ಕುರುಹುಗಳು ಇರಲಿಲ್ಲ ಎಂದರೆ ಸರಿಯಲ್ಲ . ಅಪಘಾತ ಸ್ಥಳವನ್ನು ಚಾಸಾ-1 ರವರು ತೋರಿಸಿದರು . ಘಟನಾ ಸ್ಥಳದ ಪಂಚನಾಮೆಯ ಪಂಚರು ಗುಡಗೇರಿ ಮತ್ತು ಹಿರೆಹರಕುಣಿಯವರು . ಘಟನಾ ಸ್ಥಳಕ್ಕೂ ಗುಡಗೇರಿ ಮತ್ತು ಹಿರೆಹರಕುಣಿಗೆ ಎಷ್ಟು ಅಂತರ ಇದೆ ಎಂದರೆ 25-30 ಕಿ ಮಿ ಇದೆ . ಸದರಿ ಪಂಚರನ್ನು ಯಾರು ಕರೆದುಕೊಂಡು ಬಂದರು ಎಂದರೆ ಸಾಕ್ಷಿಯು ಶವ ಪಂಚನಾಮೆ ಕಾಲಕ್ಕೆ ಇದ್ದ ಪಂಚರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದೆವು. ಘಟನಾ ಸ್ಥಳಕ್ಕೆ ಒಟ್ಟು ಮೂರು ಜನ ಹೋದೆವು . ಘಟನಾ ಸ್ಥಳಕ್ಕೆ ಪಂಚರನ್ನು ನಮ್ಮ ವಾಹನದಲ್ಲಿ ನಾವೇ ಕರೆದುಕೊಂಡು ಹೋದೆವು . ಪಂಚನಾಮೆ ಕಾಲಕ್ಕೆ ನಮ್ಮ ರೈಟರ ಇದ್ದರು . ಪಂಚನಾಮೆ ನಾನೇ ಬರೆದಿದ್ದೇನೆ . ಮದ್ಯಾಹ್ನ 2.30 ರಿಂದ 3.30 ರವರೆಗೆ ಬರೆದೆ. ಪಂಚನಾಮೆ ಬರೆಯಲು ಪಂಚರು ಮಾಹಿತಿ ಕೊಟ್ಟರು . ಹಾತ ನಕಾಶೆಯನ್ನು ಅದೆ ದಿನ ಬರೆದರು . ಹಾತನಕಾಶೆಯನ್ನು ಘಟನಾ ಸ್ಥಳದಲ್ಲಿ ಬರೆದೆ . ಪೊಟೊಗಳನ್ನು ನಮ್ಮ ಸಿಬ್ಬಂದಿಗಳು ತೆಗೆದಿದ್ದಾರೆ . ಘಟನಾ ಸ್ಥಳಕ್ಕೆ ಹೋಗಿಲ್ಲ ಠಾಣೆಯಲ್ಲಿ ಪಂಚನಾಮೆ ಮತ್ತು ಹಾತನಕಾಶೆ ಬರೆದಿದ್ದೇನೆ ಎಂದರೆ ಸರಿಯಲ್ಲ . ವಾಹನ ಪಂಚನಾಮೆ ಮಾಡಲು ಮೇಲೆ ಹೇಳಿದ ಘಟನಾ ಸ್ಥಳ ಪಂಚರು ಬಂದಿದ್ದರು . ಚಾಸಾ-2, 3 ರವರ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ . ಚಾಸಾ5 ರಿಂದ 11 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ . ಆರೋಪಿ ತಪ್ಪಿನಿಂದ ಅಪಘಾತ ಆಗದೇ ಇದ್ದರೂ ಮೃತಳ ಕುಟುಂಬಕ್ಕೆ ಪರಿಹಾರ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.